**Vijayavaani**

Date: Saturday, March 22, 2014 Page No.2

Edition: Mysore Language: Kannada

# ಉತ್ತಮ ಸಂಸ್ಥೆಗಳಿಂದ ದೇಶದ ಪ್ರಗತಿ

## ■ ಘಟಿಕೋತ್ಸವ ಭಾಷಣದಲ್ಲಿ ಸುಬ್ರೊತೊ ಬಗಚಿ

**ಮೈಸೂರು:** ಯಾವುದೇ ದೇಶ ಪ್ರಗತಿ ಹೊಂದಲು ಉತ್ತಮ ಸಂಸ್ಥೆಗಳ ಆಗತ್ಯವಿದೆ ಎಂದು ಮೈಂಡ್‌ಟ್ರೀ ಸಂಸ್ಥೆ ಅಧ್ಯಕ್ಷ ಸುಬ್ರೊತೊ ಬಗಚಿ ಹೇಳಿದರು.

ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ನಿರ್ವಹಣ ಅಭಿವೃದ್ಧಿ ಸಂಸ್ಥೆ (ಎಸ್‌ಡಿಎಂಐಎಂಡಿ)ಯ 2012-14ನೇ ಸಾಲಿನ ಪೋಸ್ಟ್ ಗ್ರಾಜುಯೇಟ್ ಡಿಪ್ಲೊಮಾ ಇನ್ ಮ್ಯಾನೇಜ್‌ಮೆಂಟ್ (ಪಿಜಿಡಿಎಂ)ನ 19ನೇ ಘಟಿಕೋತ್ಸವದಲ್ಲಿ ಶುಕ್ರವಾರ ಘಟಿಕೋತ್ಸವ ಭಾಷಣ ಮಾಡಿದರು.

ಜಪಾನ್ ಪ್ರಧಾನಿ ಯಾರೆಂದು ಪ್ರಶ್ನಿಸಿದರೆ ಶೇ.99 ಮಂದಿಯ ಬಳಿ ಉತ್ತರವಿಲ್ಲ. ಆದರೆ ಜಪಾನ್‌ನ ಅತ್ಯುತ್ತಮ ಕಂಪನಿಗಳ ಹೆಸರು ಹೇಳಿ ಎಂಬ ಪ್ರಶ್ನೆ ಮುಂದಿಟ್ಟರೆ ವಿದ್ಯಾರ್ಥಿಗಳು ಕೂಡ ಹೇಳುತ್ತಾರೆ. ಒಂದು ದೇಶದ ಅಭಿವೃದ್ಧಿಯನ್ನು ಆ ದೇಶದ ಅತ್ಯುತ್ತಮ ಸಂಸ್ಥೆಗಳು ನಿರ್ಧರಿಸುತ್ತವೆ. ಹೀಗಾಗಿ ದೇಶದ ಪ್ರಧಾನಿ ಯಾರೆಂಬುದು ಮುಖ್ಯವಲ್ಲ. ದೇಶದಲ್ಲಿ ಉತ್ತಮ ಸಂಸ್ಥೆಗಳು ಎಷ್ಟಿವೆ ಎಂಬುದು ಮುಖ್ಯ ಎಂದರು.

ನೀವು ಎಷ್ಟೇ ಉನ್ನತ ಶಿಕ್ಷಣ ಪಡೆದಿರಬಹುದು. ಆದರೆ ಅದಕ್ಕಿಂತ ಮಿಗಿಲಾಗಿ ನಿಮ್ಮಲ್ಲಿ ಅನುಕಂಪ ಇರಬೇಕು. ಅದಿದ್ದರೆ ಮಾತ್ರ ಇತರರ ಸೇವೆ ಸಾಧ್ಯವೆಂದು ಹೇಳಿದರು.

**ಪದಕ ವಿಜೇತರು:** 2012-14ನೇ ಸಾಲಿನ ಪೋಸ್ಟ್ ಗ್ರಾಜುಯೇಟ್ ಡಿಪ್ಲೊಮಾ ಇನ್ ಮ್ಯಾನೇಜ್‌ಮೆಂಟ್ (ಪಿಜಿಡಿಎಂ)ನ 178 ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಮಾಡಲಾಯಿತು.



ಧರ್ಮಸ್ಥಳ ಮಂಜುನಾಥೇಶ್ವರ ನಿರ್ವಹಣ ಅಭಿವೃದ್ಧಿ ಸಂಸ್ಥೆಯಲ್ಲಿ ನಡೆದ 19ನೇ ಘಟಿಕೋತ್ಸವ ಸಮಾರಂಭದಲ್ಲಿ ಚಿನ್ನದ ಪದಕ ವಿಜೇತ ವಿದ್ಯಾರ್ಥಿಗಳೊಂದಿಗೆ ಗಣ್ಯರು.

ವರುಣ್‌ಕುಮಾರ್ 3 ಚಿನ್ನದ ಪದಕ ಪಡೆದುಕೊಂಡರು. ದೀಪಕ್‌ನೆಸರಿಕರ್, ವಾಸುದೇವ್ ನಾಯಕ್, ಸ್ಫೂರ್ತಿ ಎಸ್.ಗೌಡ, ಜುತಿಕಾ ಕಾಂದಾರ್ ಚಿನ್ನದ ಪದಕ ಪಡೆದರು. ವೇದಿಕೆಯಲ್ಲಿ ಎಸ್‌ಡಿಎಂಐಎಂಡಿಯ ಪಿಜಿಡಿಎಂ ಅಧ್ಯಕ್ಷೆ ನೀತು ಗಣಪತಿ, ವಾಣಿಜ್ಯೋದ್ಯಮಿ ಆರ್.ಗುರು, ಬೆಂಗಳೂರಿನ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್‌ನ ನಿವೃತ್ತ ನಿರ್ದೇಶಕ ಡಾ. ಕೆ.ಆರ್. ಶ್ರೀನಿವಾಸಮೂರ್ತಿ, ನಿವೃತ್ತ ಪ್ರಾಧ್ಯಾಪಕ ಡಾ. ಪ್ರಸನ್ನಚಂದ್ರ, ಎಸ್‌ಡಿಎಂಐಎಂಡಿ ನಿರ್ದೇಶಕ ಡಾ.ಎನ್.ಆರ್. ಪರಶುರಾಮನ್, ಉಪ ನಿರ್ದೇಶಕಿ ಡಾ.ಎಚ್. ಗಾಯತ್ರಿ, ಉಜಿರೆಯ ಎಸ್‌ಡಿಎಂ ಎಜುಕೇಷನಲ್ ಟ್ರಸ್ಟ್ ಕಾರ್ಯದರ್ಶಿ ಪ್ರೊ. ಎಸ್. ಪ್ರಭಾಕರ್ ಹಾಜರಿದ್ದರು.